

ಆಕರ್ಷಕ ವಾಸ್ತುಶಿಲ್ಪದಿಂದ ಗಮನಸೆಳೆಯುವ ಗುಜರಾತಿನ ಚತ್ತರ್ಧಿಗಳು ಜಡೇಜ ರಾಜವಂಶಸ್ಥರ ಸ್ಮಾರಕ ಸಮಾಧಿಗಳು. ಇತಿಹಾಸದ ಅಧ್ಯಯನ, ವಾಸ್ತುಶಿಲ್ಪದ ಅಭ್ಯಾಸಕ್ಕೆ ಜೀವಂತ ಪುಸ್ತಕದಂತಿದೆ ಈ ತಾಣ.





## ಇತಿಹಾಸದ ಮೆಲುಕು

ಚತ್ತರ್ಧಿ ಅಥವಾ ಛತ್ರಿ ಎಂದು ಕರೆಯಲಾಗುವ ಸ್ಮಾರಕ ಸಮಾಧಿಗಳು, 18ನೇ ಶತಮಾನದಲ್ಲಿ ಜಡೇಜ ರಾಜವಂಶದ ಕಾಲದಲ್ಲಿ ನಿರ್ಮಿಸಲಾದವು. ಈ ರಾಜವಂಶಸ್ಥರು ರಜಪೂತ್ ಮೂಲದವರೆಂದು ಪರಿಗಣಿಸಲಾಗಿದ್ದು, ಅವರು ಕಛ್ ಪ್ರದೇಶವನ್ನು ಶತಮಾನಗಳ ಕಾಲ ಆಳಿದರು. ಅವರ ಆಳ್ವಿಕೆಯಲ್ಲಿ ಭುಜ್ ರಾಜಕೀಯ, ವಾಣಿಜ್ಯ ಮತ್ತು ಕಲಾ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿ ಬೆಳೆಯಿತು. ಪ್ರಮುಖ ರಾಜರಲ್ಲಿ ರಾವ್ ಲಕ್ಷತ್ ಅವರ ಕಾಲವು (1741–1752) ಚತ್ತರ್ಧಿಗಳ ನಿರ್ಮಾಣದ ಸುವರ್ಣಯುಗವಾಗಿತ್ತು. ಅವರು ಶಿಲ್ಪಕಲೆಯ ಅಭಿಮಾನಿಯಾಗಿದ್ದು, ಶಿಲ್ಪಿಗಳು ಮತ್ತು ವಾಸ್ತುಕಾರರಿಗೆ ಪ್ರೋತ್ಸಾಹ ನೀಡಿದರು. ಈ ಕಾಲದಲ್ಲಿ ನಿರ್ಮಿಸಲಾದ ಚತ್ತರ್ಧಿಗಳು ರಾಜವಂಶದ ಸ್ಮಾರಕಗಳಾಗಿದ್ದು, ಅವರ ಜೀವಿತ ಕಾಲದ ಗೌರವವನ್ನು ಮತ್ತು ಮೃತ್ಯು ನಂತರದ ಸ್ಮರಣೆಯನ್ನು ಅಮರಗೊಳಿಸಿದವು.

ಚತ್ತರ್ಧಿಗಳ ವಾಸ್ತುಶಿಲ್ಪವು ರಜಪೂತ್ ಮತ್ತು ಮುಘಲ್ ಶೈಲಿಗಳ ಸಮನ್ವಯವಾಗಿದೆ. ಇವುಗಳಲ್ಲಿ ರಾಜಸ್ಥಾನದ ಜಾಲಿ (ಕಲ್ಲಿನಲ್ಲಿ ಕೆತ್ತಿದ ನಾಜೂಕು ಜಾಲ) ಶೈಲಿ, ಮುಘಲ್ ಕಾಲದ ಗುಮ್ಮಟ, ಆರ್ಚ್‌ಗಳು ಮತ್ತು ಗುಂಬಜುಗಳು ಹಾಗೂ ಗುಜರಾತ್‌ನ ಸ್ಥಳೀಯ ವಿನ್ಯಾಸಗಳು ಸೇರಿಕೊಂಡಿವೆ. ಚತ್ತರ್ಧಿಗಳು ಪ್ರಮುಖವಾಗಿ ರಕ್ತ ಬಣ್ಣದ ಮರಳುಗಲ್ಲಿನಿಂದ ನಿರ್ಮಿತವಾಗಿವೆ. ಈ ಕಲ್ಲು ಮಳೆ ಮತ್ತು ಬಿಸಿಲಿನಿಂದ ಅಬಾಧಿತವಾಗಿರುತ್ತದೆ. ಕೆಲವು ಸ್ಮಾರಕಗಳಲ್ಲಿ ಬಿಳಿ ಮಾರ್ಬಲ್ ಉಪಯೋಗಿಸಲಾಗಿದ್ದು, ಸ್ಮಾರಕಗಳಿಗೆ ಶುದ್ಧತೆ ಮತ್ತು ಶ್ರೇಷ್ಠತೆಯ ಭಾವನೆ ನೀಡುತ್ತದೆ.

